ಸಿ.ಸಿ.255/2023 ಪಿಡಬ್ಲ್ಯೂ-1

ದಿನಾಂಕಃ 01.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ.ವಿ. ವಕೀಲರಿಂದಃ**

ನಿಪಿ-1 ನ್ನು ಹಾಜರುಪಡಿಸಿದಾಗ ಬ್ಯಾಂಕ್ ನವರು ಏನೆಂದು ಹಿಂಬರಹವನ್ನು ನೀಡಿರುತ್ತಾರೆ ಎಂಬುದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಹಿಂಬರಹದ ದಿನಾಂಕ ನನಗೆ ನೆನಪಿರುವುದಿಲ್ಲ. ನಿಪಿ-1 ರಲ್ಲಿ ನಮೂದಿಸಿರುವ ದಿನಾಂಕದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಚೆಕ್ ನ ಸಂಖ್ಯೆಯೂ ನನಗೆ ನೆನಪಿರವುದಿಲ್ಲ. ದಿ.06.12.2022 ರಂದು ಆರೋಪಿಯು ನನಗೆ ನಿಪಿ-1 ನ್ನು ನೀಡಿರುತ್ತಾರೆ. ನಿಪಿ-1 ನ್ನು ಎಷ್ಟು ದಿನದ ನಂತರ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ಬೆಳದಿದ್ದಂತಹ ಕಾಫೀ, ಅಡಿಕೆ ಮತ್ತು ಏಲಕ್ಕಿಯನ್ನು ಮಾರಾಟ ಮಾಡಿದ್ದ ಬಾಬ್ತು ಅವರು ನನಗೆ ಹಣವನ್ನು ನೀಡಬೇಕಾಗಿರುತ್ತದೆ. ಸದರಿ ಬೆಳೆಯು 2021 ರ ಸಾಲಿನ ಬೆಳೆಯಾಗಿರುತ್ತದೆ. ನಾನು ಆರೋಪಿಗೆ ಎಷ್ಟು ಮೊತ್ತದ ಬೆಳೆಯನ್ನು ಮಾರಾಟ ಮಾಡಿರುತ್ತೇನೆ ಎಂದು ಪ್ರಸ್ತುತವಾಗಿ ನೆನಪಾಗುತ್ತಿಲ್ಲ. ನಾನು ಮೇಲೆ ತಿಳಿಸಿದ ಬೆಳೆಯನ್ನು ಬೆಳೆಯುತ್ತಿರುವ ಬಾಬ್ತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ನಾನು ಮೇಲೆ ಹೇಳಿದಂತೆ ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾವು 4 ಜನ ಮಕ್ಕಳು, ನಾವು 4 ಜನ ಪ್ರತ್ಯೇಕವಾಗಿ ಒಂದೇ ದಿನಾಂಕದ 4 ಚೆಕ್ ನ್ನು ಹಾಜರುಮಾಡಿ ಪ್ರತ್ಯೇಕವಾದ ಪ್ರಕರಣಗಳನ್ನು ಆರೋಪಿಯ ವಿರುದ್ಧ ದಾಖಲು ಮಾಡಿರುತ್ತೇವೆ ಎಂದರೆ ಸರಿ.

ಸದರಿ 4 ಪ್ರಕರಣಗಳೂ ಈ ನ್ಯಾಯಾಲಯದ ಮುಂದೆ ಚಾಲ್ತಿಯಲ್ಲಿರುತ್ತವೆ ಎಂದರೆ ಸರಿ. ನಿಪಿ-1 ರಲ್ಲಿರುವ ಆರೋಪಿಯ ಸಹಿಯನ್ನು ನಾನೇ ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ರೀತಿಯ ಬೆಳೆಗಳನ್ನು ನಮ್ಮಿಂದ ಕೊಂಡುಕೊಂಡಿರುವುದಿಲ್ಲ ಮತ್ತು ಅವರು ಆ ರೀತಿಯ ಯಾವುದೇ ವ್ಯವಹಾರವನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು 4 ಜನ ಅಣ್ಣ ತಮ್ಮಂದಿರು ದೌರ್ಜನ್ಯ ಎಸಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.